**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ</u>**

**<u>ಸಿ.ಸಿ.ನಂ. 52/2024</u>**

ಪಿರ್ಯಾದುದಾರಃ 1. ಕರ್ನಾಟಕ ಸರ್ಕಾರದ ಪರ ಜೇವರ್ಗಿ ಪೋಲಿಸ

**ವಿರುದ್ಧ**

ಆರೋಪಿತರು
1. ಇಸ್ಮಾಯಿಲ್ ತಂದೆ ರುಕುಂ ಪಟೇಲ ಹಳ್ಳೂರು,
ವಃ 23 ವರ್ಷ, ಉಃ ಡ್ರೈವರ್ ಕೆಲಸ,
ಸಾ. ಜನತಾ ಕಾಲೋನಿ ಜೇವರ್ಗಿ, ತಾಃ ಜೇವರ್ಗಿ.
2. ಅಬ್ದುಲ್ ವಾಹಿದ್ ತಂದೆ ಅಬ್ದುಲ ಗನಿ,
ವಃ 45 ವರ್ಷ, ಉಃ ವ್ಯಾಪಾರ,
ಸಾ. ಶಾಸ್ತ್ರೀ ಚೌಕ ಜೇವರ್ಗಿ, ತಾಃ ಜೇವರ್ಗಿ.

**<u>ದೋಷಾರೋಪಣೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್‌ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 28-03-2023ರಂದು ಮಧ್ಯಾಹ್ನ 2-30 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿನ ಜೇವರ್ಗಿ ಪಟ್ಟಣದ ಬಸವೇಶ್ವರ ಸರ್ಕಲ್ ಹತ್ತಿರ ರಸ್ತೆಯ ಮೇಲೆ ಆರೋಪಿತರಾದ ನೀವು ಯಾವುದೇ ರಾಜಧನ ಪಾವತಿಸದೇ (ರಾಯಲ್ಟಿ) ಮತ್ತು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಪಡೆಯದೆ ಮತ್ತು ಅಕ್ರಮವಾಗಿ ಮರಳನ್ನು ಕಳ್ಳತನದಿಂದ ಮಾರಾಟ ಮಾಡಲು ಸಾಗಿಸುತ್ತಿದ್ದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 379 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ 04-04-2026ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

1ನೇ ಆರೋಪಿಯ ಉತ್ತರಃ

2ನೇ ಆರೋಪಿಯ ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

1ನೇ ಆರೋಪಿಯ ಉತ್ತರಃ

2ನೇ ಆರೋಪಿಯ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಜೇವರ್ಗಿ
ದಿನಾಂಕಃ 04-04-2026

(ಶ್ರೀಮತಿ ತಯ್ಯಬಾ ಸುಲ್ತಾನಾ)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ